ಫಿಕ್ಸ್ ಮಾಡ್ಬಿಡಿ' ಅಂದ್ಬಿಟ್ಟೆ. ಹೇಳೋದೇನೋ ಹೇಳಿಬಿಟ್ಟೆ. ಏನು ಮಾಡೋದು ಅಂತ ಯೋಚನೆ ಮಾಡುತ್ತಿದ್ದಾಗ ಮಲ್ಲಿಕಾರ್ಜುನ ಮಹಾಮನೆ ಅವರು ಕಾರ್ಪೊರೇಷನ್‌ನಲ್ಲಿ ಕೆಲಸದಲ್ಲಿದ್ದರು. ಅವರ ಹತ್ರ ಹೋಗಿ ಇಂಗಾಯ್ತು ಅಂತ ಹೇಳಿದೆ. ಅದುಕ್ಕೆ ಅವರು 'ಮೇಷ್ಟ್ರತ್ರ ಹೋಗಾನ' ಅಂತ ಸಿದ್ಧಲಿಂಗಯ್ಯನವರ ಹತ್ರ ಕರೆದುಕೊಂಡು ಹೋದರು. ಸಿದ್ಧಲಿಂಗಯ್ಯನವರು ಇಂಗೇ ಕೂತಿದ್ರು. ನನ್ನನ್ನು ಪರಿಚಯ ಮಾಡಿಕೊಟ್ಟರು ಮಹಾಮನೆ. ಅವರು ನನ್ನ ಹಾಡುಗಾರಿಕೆಯನ್ನು ಕೇಳಿದ್ರು. 'ಕುಮಾರವ್ಯಾಸ ಭಾರತ'ದ ಒಂದು ಷಟ್ಪದಿ ಹಾಡಿ ಅಂದ್ರು. ಅವರು ನಾನು ಗಮಕದಲ್ಲಿ ಹಾಡ್ತೀನಿ ಅಂದುಕೊಂಡಿದ್ರು. ನಾನು ತಾಳದಲ್ಲಿ ಹಾಡಿದೆ.

**'ವೇದ ಪುರುಷನ ಸುತನಸುತನ ಸಹೋದರನ ಎಮ್ಮಗನಮಗನ...'**

ಇಂಗೇ ತಾಳದಲ್ಲಿ ಹಾಡಿದೆ. ತಾಳದಲ್ಲಿ ಯಾರೂ ಹಾಡಲ್ಲ. ಗಮಕದಲ್ಲಷ್ಟೇ ಹಾಡೋದು. ನಾನು ತಾಳದಲ್ಲಿ ಹಾಡಿದ್ದಕ್ಕೆ ಕವಿಗಳು ಖುಷಿ ಆಗಿಬಿಟ್ರು. 'ಏನಪ್ಪಾ ಇವನು ಕುಮಾರವ್ಯಾಸ ಭಾರತಾನ ತಾಳಕ್ಕೆಲ್ಲ ಹಾಡಿಕೊಂಡು ಹೋಗ್ತಿದ್ದಾನೆ' ಅಂತ ಅವರಿಗೆ ಆಶ್ಚರ್ಯ ಆಯಿತು. ದೇ. ಜವರೇಗೌಡರು ಅಂಬೇಡ್ಕರ್ ಅವರ ಮೇಲೆ ಒಂದು ಬುಕ್ ಬರೆದಿದ್ದರು. ಅದನ್ನು ಕೊಟ್ಟು 'ಈ ಪುಸ್ತಕನ ಓದಿ ಒಂದು ವಾರ ಆದಮೇಲೆ ನನ್ನ ಹತ್ತಿರ ಬಾ' ಅಂತ ಹೇಳಿ ಕಳುಹಿಸಿದರು ಸಿದ್ಧಲಿಂಗಯ್ಯ ಅವರು. ಸರಿಯಾಗಿ ಓದಕ್ಕೆ ಆಗಲಿಲ್ಲ. ವಾರ ಮುಗಿದ ಮೇಲೆ. ಓದಿದ್ದೀನಿ ಅಂತ ಸುಳ್ಳು ಹೇಳ್ದೆ. ನಲವತ್ತು ಐವತ್ತು ನಿಮಿಷಕ್ಕೆ ಎಷ್ಟು ಬೇಕೋ ಅಷ್ಟು–ಅಂಬೇಡ್ಕರ್ ಹುಟ್ಟಿದ್ದು, ಬೆಳೆದದ್ದು, ಅವರ ತಾಯಿ ತಂದೆ, ಇವಷ್ಟನ್ನೇ ಹೇಳಿಕೊಟ್ಟರು ಸಿದ್ಧಲಿಂಗಯ್ಯ ಅವರು.

ಕಾರ್ಯಕ್ರಮದ ದಿನ ಬಂದೇಬಿಡ್ತು. ಬೆಂಗಳೂರಿನ ಯವನಿಕಾದಲ್ಲಿ ನಾನು ಪೇಟ ಕಟ್ಕಂಡು, ನಾಮ ಧರಿಸಿಕೊಂಡು, ಬಿಳಿಧೋತ್ರ ಹಾಕಂಡು ರೆಡಿಯಾಗ್ತಿದ್ದೆ. ಅಂಬೇಡ್ಕರ್ ಜಯಂತಿಗೆ ಹೇಗೆ




ಅಂದಿನ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರಿಂದ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಕ್ಷಣ.